ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 11–8–2015

# ಮಾಧ್ಯಮದವರ ಗಮನಕ್ಕೆ

ಆಗಸ್ಟ್ 15 ರಂದು ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪೆರೇಡ್ ಮೈದಾನದಲ್ಲಿ ಜರುಗುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಮಾಧ್ಯಮ ಪ್ರತಿನಿಧಿಗಳು ಸುದ್ದಿ ಮುಖ್ಯಸ್ಥರ ಶಿಫಾರಸ್ಸು ಪತ್ರದೊಂದಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಎರಡನೇ ಮಹಡಿಯಲ್ಲಿರುವ ಬೆಂಗಳೂರು ನಗರ ಕಚೇರಿಯಲ್ಲಿ ದಿನಾಂಕ 12–8–2015 ರಿಂದ ಬೆಳಿಗ್ಗೆ 11–00 ಗಂಟೆಯಿಂದ ಸಂಜೆ 5–00 ಗಂಟೆಯೊಳಗೆ ಮಾಧ್ಯಮ ಆಹ್ವಾನ ಪತ್ರಿಕೆಗಳನ್ನು ಪಡೆದುಕೊಳ್ಳಬಹುದಾಗಿದೆ.

ಸೂಚನೆ: ರಾಜ್ಯಮಟ್ಟದ ದಿನ ಪತ್ರಿಕೆಗಳಿಂದ ಮೂವರಿಗೆ ಮತ್ತು ಸುದ್ದಿ ವಾಹಿನಿಯಿಂದ ನಾಲ್ವರಿಗೆ ಮಾತ್ರ ಅವಕಾಶ.

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಸಾರ್ವಜನಿಕ ಬಹಿರಂಗ ವಿಚಾರಣೆ

ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ವಿವಿಧ ಜಾತಿ, ಜನಾಂಗಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಹೊಸದಾಗಿ ಸೇರಿಸಲು ಪ್ರವರ್ಗಗಳ ಬದಲಾವಣೆಗೆ ಪರ್ಯಾಯ ಪದ ಸೇರ್ಪಡೆಗೆ ಮತ್ತು ದೋಷಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಅಫಿಡವಿಟ್ ಮೂಲಕ ಸ್ವೀಕರಿಸಿರುವ ಹಾಗೂ ಮುಂದೆ ಸ್ವೀಕರಿಸುವ ಮನವಿಗಳ ಬಗ್ಗೆ ಕಲಬುರಗಿಯಲ್ಲಿ ಸೆಪ್ಟೆಂಬರ್ 14 ರಂದು ಮತ್ತು ಬೀದರ್‌ನಲ್ಲಿ ಸೆಪ್ಟೆಂಬರ್ 15 ರಂದು ಆಯಾಯ ಜಿಲ್ಲಾದಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಬೆಳಿಗ್ಗೆ 11–00 ಗಂಟೆಗೆ ಬಹಿರಂಗ ವಿಚಾರಣೆಯನ್ನು ನಡೆಸಲು ಉದ್ದೇಶಿಸಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

## ಅವಧಿ ವಿಸ್ತರಣೆ

**ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)**

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯು ಯಕ್ಷಗಾನ ಮತ್ತು ಬಯಲಾಟ ಕಲಾಪ್ರಕಾರಗಳಲ್ಲಿ 2014ನೇ ಸಾಲಿನ ಕ್ಯಾಲೆಂಡರ್ ವರ್ಷದಲ್ಲಿ (ಜನವರಿಯಿಂದ ಡಿಸೆಂಬರ್ ಒಳಗೆ) ಪ್ರಕಟಿಸಿರುವ ಪುಸ್ತಕಗಳನ್ನು ಬಹುಮಾನಕ್ಕೆ ಆಯ್ಕೆಮಾಡುವ ಬಗ್ಗೆ ಲೇಖಕರಿಂದ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಇರುವ ಅವಧಿಯನ್ನು ಆಗಸ್ಟ್ 30 ರವರಗೆ ವಿಸ್ತರಿಸಿದೆ.

ಬಾಬು:ಜಿಪಿಆರ್.

## ವಾಹನ ತರಬೇತಿಗಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)**

ಪ್ರಾದೇಶಿಕ ಸಾರಿಗೆ ಕಚೇರಿ, ಚಿಕ್ಕೋಡಿ ವತಿಯಿಂದ ಎಸ್‌ಸಿಪಿ/ಟಿಎಸ್‌ಪಿ ಉಪಯೋಜನೆಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಲಘು ಮೋಟಾರು ವಾಹನ, ಆಟೋರಿಕ್ಷಾ ಮತ್ತು ಭಾರಿ ಸರಕು ಸಾಗಣೆ ವಾಹನ ಚಾಲನಾ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

20 ವರ್ಷಗಳಿಗೆ ಮೇಲ್ಪಟ್ಟ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಎಂಟನೇ ತರಗತಿಯಲ್ಲಿ ತೇರ್ಗಡೆಯಾದ ನಿರುದ್ಯೋಗಿ ಯುವಕರು ಯುವತಿಯರು ಈ ತರಬೇತಿಯಲ್ಲಿ ಭಾಗವಹಿಸಬಹುದಾಗಿದೆ.

ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಕಚೇರಿಯಿಂದ ಪಡೆಯಬಹುದು. ತರಬೇತಿಯ ವೆಚ್ಚದ ಶೇಕಡಾ 25 ಮೊತ್ತವನ್ನು ಆಯ್ಕೆಯಾದ ಅಭ್ಯರ್ಥಿಗಳು ಭರಿಸಬೇಕಾಗಿದ್ದು ಉಳಿದ ಶೇಕಡಾ 75 ಮೊತ್ತ ಆರ್ಥಿಕ ಸಹಾಯಧನವನ್ನು ಸಾರಿಗೆ ಇಲಾಖೆಯಿಂದ ಭರಿಸಲಾಗುವುದು. ನಿಗದಿತ ಅರ್ಜಿ ಲಗತ್ತು ಜಾತಿ, ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ಹಾಗೂ ಎಂಡನೇ ತರಗತಿಯಲ್ಲಿ ತೇರ್ಗಡೆಯಾದ ಬಗ್ಗೆ ಪ್ರಮಾಣ ಪತ್ರವನ್ನು ಲಗತ್ತಿಸಿ ಆಗಸ್ಟ್ 17 ರ ಒಳಗಾಗಿ ಕಚೇರಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಬಾಬು:ಜಿಪಿಆರ್.

## ಸಂಗೊಳ್ಳಿರಾಯಣ್ಣ ಪ್ರತಿಷ್ಠಾನದ ಸದಸ್ಯ ಕಾರ್ಯದರ್ಶಿ ನೇಮಕ

**ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)**

ರಾಜ್ಯ ಸರ್ಕಾರವು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ. ಎಂ.ಆರ್. ಏಕಾಂತಪ್ಪ ಅವರನ್ನು ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಪ್ರತಿಷ್ಠಾನದ ಸದಸ್ಯ ಕಾರ್ಯದರ್ಶಿಯಾಗಿ ನೇಮಿಸಿದ್ದು, ಅವರು ಇತ್ತೀಚೇಗೆ ಅಧಿಕಾರ ವಹಿಸಿಕೊಂಡಿದ್ದಾರೆ.

ಬಾಬು:ಜಿಪಿಆರ್.

## ನೇಮಕಾತಿ

**ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)**

ಕೇಂದ್ರ ಸರ್ಕಾರದ ಗೃಹ ಸಚಿವಾಲಯದಲ್ಲಿ ಬಾಕಿಯಿರುವ ಕರ್ನಾಟಕ ರಾಜ್ಯಪಾಲರು ರಾಷ್ಟ್ರಾಧ್ಯಕ್ಷರ ಅನುಮೋದನೆಗಾಗಿ ಕಾಯ್ದಿರಿಸುವ ವಿಧೇಯಕಗಳ/ನಿರ್ಣಯಗಳ ಹಂತವನ್ನು ನಿಗಾವಹಿಸಿ ಅವುಗಳಬಗ್ಗೆ ಕಾಲಕಾಲಕ್ಕೆ ಸ್ಪಷ್ಟೀಕರಣ/ನೆನಪೋಲೆ ಕಾರ್ಯಗಳ ನಿರ್ವಹಣೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ವಿಭಾಗಕ್ಕೆ ಪ್ರತಿ ತಿಂಗಳು ಮಾಹಿತಿ ನೀಡಲು ಸಂಸದೀಯ ವ್ಯವಹಾರಗಳ ಇಲಾಖೆಯ ಜಿ.ಶ್ರೀಧರ್, ಸರ್ಕಾರದ ಅಪರ ಕಾರ್ಯದರ್ಶಿ ಇವರನ್ನು ಸಮನ್ವಯ ಅಧಿಕಾರಿಯಾಗಿ (ನೋಡಲ್ ಅಧಿಕಾರಿ) ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಅಲ್ಲದೆ, ಜಿ. ಶ್ರೀಧರ್ ಅವರನ್ನು ಸಂಸದೀಯ ವ್ಯವಹಾರಗಳ ಇಲಾಖೆಯ ಅಪರ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಬಾಬು:ಜಿಪಿಆರ್.

## ಅವಧಿ ವಿಸ್ತರಣೆ

**ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಲ್ಲಿ ಹಿರಿಯ ವೈದ್ಯಾಧಿಕಾರಿ/ತಜ್ಞರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹಾಗೂ ದಂತ ಆರೋಗ್ಯಾಧಿಕರಿಗಳ ಒಟ್ಟು 1401 ಹುದ್ದೆಗಳನ್ನು ತುಂಬಲು ಕೊನೆಯ ದಿನಾಂಕವನ್ನು ಆಗಸ್ಟ್ 24 ರವರೆಗೆ ವಿಸ್ತರಿಸಿದ್ದು, ಶುಲ್ಕ ಪಾವತಿಸಲು ಆಗಸ್ಟ್ 25 ಕೊನೆಯ ದಿನಾಂಕವಾಗಿದೆ.

ಬಾಬು:ಜಿಪಿಆರ್

## LAST DATE EXTENDED

**Bangalore, Aug 11th (Karnataka Information)**

Karnataka Public Service Commission has invited applications for recruitment to the 1401 posts of Specialists, General Duty Medical Officers and Dental Health Officer in the Department of Health and Family Welfare Services .

Accordingly, the last date for filling applications has been extended to 24-08-2015 and for payment of fees to 25-08-2015.

babu:gpr.

## ಬಿ.ಎಸ್.ಎಫ್. ಸೈಕಲ್ ಸಫಾರಿ

ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)

ಗಡಿ ಭದ್ರತಾ ಪಡೆಯು 24 ಸೈಕಲ್ ಸವಾರರೊಂದಿಗೆ ಬೆಂಗಳೂರಿನಿಂದ ಹೈದರಾಬಾದ್‌ಗೆ ಆಗಸ್ಟ್ 12 ರಿಂದ 15 ರವರೆಗೆ ಸೈಕಲ್ ಸಫಾರಿಯನ್ನು ಹಮ್ಮಿಕೊಂಡಿದೆ. ಗಡಿ ಭದ್ರತಾ ಪಡೆಯ 60ನೇ ವರ್ಷದ ಆಚರಣೆಗಾಗಿ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಈ ಸೈಕಲ್ ಸಫಾರಿಯನ್ನು ಆಯೋಜಿಸಿದೆ.

ಆಗಸ್ಟ್ 12 ರಂದು ಗಡಿ ಭದ್ರತಾ ಪಡೆಯ ಐ.ಜಿ. ಪಿ.ಎಸ್. ಸಂಧೂ ಅವರು ಈ ಸೈಕಲ್ ಸಫಾರಿಯನ್ನು ಉದ್ಘಾಟಿಸಿ ಮಾತನಾಡುವರು. ದಕ್ಷಿಣ ರಾಜ್ಯಗಳಲ್ಲಿ ಗಡಿ ಭದ್ರತಾ ಪಡೆಯ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ಉದ್ದೇಶದಿಂದ ಈ ಸಫಾರಿ ಹಮ್ಮಿಕೊಳ್ಳಲಾಗಿದೆ ಎಂದು ಗಡಿ ಭದ್ರತಾ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

## ಡಿಪ್ಲೋಮಾ ಇನ್ ಸಿನೆಮಾಟೊಗ್ರಫಿ, ಸೌಂಡ್ ರೆಕಾರ್ಡಿಂಗ್: ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)

ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ ವತಿಯಿಂದ 2015–16 ನೇ ಸಾಲಿನ ಡಿಪ್ಲೊಮಾ ಇನ್ ಸಿನೆಮಾಟೊಗ್ರಫಿ ಮತ್ತು ಡಿಪ್ಲೊಮಾ ಇನ್ ಸೌಂಡ್ ರೆಕಾರ್ಡಿಂಗ್ ಅಂಡ್ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ನೀಡುವ ಮತ್ತು ಸ್ವೀಕರಿಸುವ ದಿನಾಂಕವನ್ನು ವಿಸ್ತರಿಸಲಾಗಿದೆ.

ಸರ್ಕಾರಿ ಆದೇಶದ ಪ್ರಕಾರ ಹೊರ ರಾಜ್ಯದ ಅಭ್ಯರ್ಥಿಗಳಿಗೆ ಶೇ 50 ರಷ್ಟು ಪ್ರವೇಶಾವಕಾಶ ಕಲ್ಪಿಸಲಾಗಿದೆ.

ಅಭ್ಯರ್ಥಿಗಳು ಕರ್ನಾಟಕ ದ್ವಿತೀಯ ಪಿ.ಯು.ಸಿ. ವಿಜ್ಞಾನ (ಪಿ.ಸಿ.ಎಂ. ವಿಷಯಗಳಲ್ಲಿ) ಅಥವಾ ತತ್ಸಮಾನ ಹಾಗೂ ಹೊರ ರಾಜ್ಯಗಳ ಅಭ್ಯರ್ಥಿಗಳು 10 + 2 (ಪಿ.ಸಿ.ಎಂ. ವಿಷಯಗಳಲ್ಲಿ) ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಒಟ್ಟಾರೆಯಾಗಿ ಶೇ 35 ರಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು.

ಅರ್ಜಿಗಳನ್ನು ಪ್ರಾಂಶುಪಾಲರ ಕಚೇರಿ, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ ಅಂಚೆ, ಬೆಂಗಳೂರು – 88, ಇಲ್ಲಿಂದ ರೂ 300/– (ಎಸ್‌ಸಿ/ಎಸ್‌ಟಿ ಮತ್ತು ಪ್ರವರ್ಗ–1 ರ ಅಭ್ಯರ್ಥಿಗಳು ರೂ 250/–) ಗಳನ್ನು ಪಾವತಿಸಿ ಖುದ್ದಾಗಿ ಪಡೆಯಬಹುದು.

ಅರ್ಜಿಗಳನ್ನು ನೀಡುವ ಹಾಗೂ ಭರ್ತಿಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು ಆಗಸ್ಟ್ 14 ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 080–28466768, 28446672, ಅಥವಾ ವೆಬ್‌ಸೈಟ್ web: www.filminstitutebangalore.com ಅನ್ನು ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

## ಶಿಕ್ಷಣ ಅದಾಲತ್

ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)

ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಉತ್ತರ ಜಿಲ್ಲಾ ವ್ಯಾಪ್ತಿಗೆ ಸಂಬಂಧಿಸಿದಂತೆ ಬಾಕಿ ಇರುವ ಕಡತ/ಪತ್ರಗಳನ್ನು ವಿಲೇವಾರಿಗಾಗಿ ಆಗಸ್ಟ್ 20 ರಂದು ಬೆಳಿಗ್ಗೆ 10–30 ರಿಂದ ಮಧ್ಯಾಹ್ನ 2–00 ಗಂಟೆಯವರೆಗೆ ಶಿಕ್ಷಣ ಅದಾಲತ್ ಕಾರ್ಯಕ್ರಮವನ್ನು ಶಿಕ್ಷಕರ ಸದನ, ಕೆ.ಜಿ. ರಸ್ತೆ, ಬೆಂಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಸಾರ್ವಜನಿಕರು, ಶಿಕ್ಷಕರು, ನೌಕರರು, ಖಾಸಗಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯವರು ಅಹವಾಲುಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಬಾಬು:ಜಿಪಿಆರ್.

## ಸಂತಾಪ

ಬೆಂಗಳೂರು, ಆಗಸ್ಟ್ 11 (ಕರ್ನಾಟಕ ವಾರ್ತೆ)

ಕನ್ನಡದ ಕಟ್ಟಾಭಿಮಾನಿ ಕಯ್ಯಾರ್ ಕಿಂಞ್ಞಣ್ಣ ರೈ ಅವರ ನಿಧನಕ್ಕೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸುಭಾಷ್ ಎಸ್. ಛಾಯಾಗೋಳ ಸಂತಾಪ ವ್ಯಕ್ತಪಡಿಸಿದ್ದಾರೆ.

ಪೂರ್ಣಿಮಾಜಿಪಿಆರ್.